**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನರಾಯಪಟ್ಟಣ**

**ಸಿ.ಸಿ.ನಂ.282/2024**

ಪಿರ್ಯಾದುದಾರರು :- -ವಿರುದ್ಧ - ಆರೋಪಿತರು :-

ಎನ್.ಪಿ.ಶಾಂತಕುಮಾರ ಎ.ಆರ್.ಚಂದ್ರೇಗೌಡ

ಹೆಸರು :

ತಂದೆಯ ಹೆಸರು :

ವಯಸ್ಸು :

ಉದ್ಯೋಗ :

ವಾಸ :

**ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ**

**ಪ್ರಶ್ನೆ 1** : ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿರಾ ?

ಉತ್ತರ :

**ಪ್ರಶ್ನೆ 2** : ಫ್ರಾಸಾ-1- ಎನ್.ಪಿ.ಶಾಂತಕುಮಾರ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿ ತನ್ನ ಜಮೀನನ್ನು ಕೊಂಡುಕೊಳ್ಳಲು ಒಪ್ಪಿ ಕ್ರಯದ ಕರಾರು ಪತ್ರವನ್ನು ಬರೆಯಿಸಿ ಕೊನೆಗೆ ಆರೋಪಿ ಬೇರೆ ಕಡೆ ಜಮೀನು ಕೊಂಡುಕೊಂಡಿದ್ದು, ಸದರಿ ಕ್ರಯದ ನಿಷ್ಕರ್ಷೆಯ ಹಣವನ್ನು ಮತ್ತು ನೋಂದಣಿ ಶುಲ್ಕವನ್ನು ಸೇರಿಸಿ ಒಟ್ಟಿಗೆ ಸದರಿ ಹಣದ ಪಾವತಿಗಾಗಿ ಆರೋಪಿ ತಾನು ಖಾತೆ ಹೊಂದಿರುವ ಹೆಚ್.ಡಿ.ಎಫ್.ಸಿ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್ ನಂ.043 ರೂ.15 ಲಕ್ಷ ಗಳಿಗೂ, ಚೆಕ್ ನಂ.044 ರೂ.10 ಲಕ್ಷ ಗಳಿಗೂ, ಚೆಕ್ ನಂ.045 ರೂ.3,75,000/- ಗಳಿಗೂ ಒಟ್ಟು ರೂ.28,75,000/- ಗಳಿಗೆ ಚೆಕ್ ಗಳನ್ನು ಮುಂಗಡ ದಿಃ 23.08.2018 ಎಂದು ನಮೂದಿಸಿ ತನಗೆ ನೀಡಿದ್ದು, ತಾನು ಹಣ ಪಡೆಯುವ ಸಲುವಾಗಿ ದಿನಾಂಕಃ 24.08.2018 ರಂದು ತಾನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'ಸಾಕಷ್ಟು ಹಣವಿಲ್ಲ' ಎಂಬ ಹಿಂಬರಹದೊಂದಿಗೆ ದಿಃ 13.09.2018 ರಂದು ಚೆಕ್ಕನ್ನು ವಾಪಸ್ ನೀಡಿದ್ದು ನಂತರ ತಾನು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ

11.10.2018 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ದಿಃ 16.10.2018 ರಂದು ವಾಪಸ್ಸಾಗಿದ್ದು, ಆರೋಪಿಗೆ ಈ ಎಲ್ಲಾ ಮಾಹಿತಿ ತಿಳಿದಿದ್ದರೂ ಯಾವುದೇ ಜವಾಬನ್ನು ನೀಡದೆ, ಸಾಲದ ಹಣವನ್ನು ವಾಪಸ್ಸು ಮಾಡಿರುವುದಿಲ್ಲವಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 3** : ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀಡಿರುವ ಚೆಕ್ಕನ್ನು ನಿಪಿ–1 ರಿಂದ ನಿಪಿ–3 ರಂತೆ, ಆರೋಪಿಯ ಸಹಿಯನ್ನು ನಿಪಿ–1(ಎ) ರಿಂದ 3(ಎ) ರಂತೆ, ಬ್ಯಾಂಕ್ ಹಿಂಬರಹಗಳನ್ನು ನಿಪಿ–4 ರಿಂದ ನಿಪಿ–6 ರಂತೆ, ವಕೀಲರ ತಿಳುವಳಿಕೆ ಪತ್ರದ ಪ್ರತಿಯನ್ನು ನಿಪಿ–7 ರಂತೆ, ನೊಂದಾಯಿತ ರಶೀದಿಯನ್ನು ನಿಪಿ–8 ರಂತೆ, ಸ್ಟೇಟ್ ಮೆಂಟ್ ಆಫ್ ಅಕೌಂಟನ್ನು ನಿಪಿ–9 ರಂತೆ ಮತ್ತು ಹಿಂದಿರುಗಿ ಬಂದ ತಿಳುವಳಿಕೆ ಪತ್ರ ಮತ್ತು ಲಕೋಟೆಯನ್ನು ನಿಪಿ–10 ರಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 4** : ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ :

**ಪ್ರಶ್ನೆ 5** : ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಯನ್ನು ಹಾಜರು ಮಾಡುವಿರಾ?

ಉತ್ತರ :

**ಪ್ರಶ್ನೆ 6** : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?

ಉತ್ತರ :

**ದಿನಾಂಕ 17 ನೇ ಮಾರ್ಚ್ 2026**

ಆರೋಪಿ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ತಯಾರಿಸಿ ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ನಂತರ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಓ. ಹೇ. ಕೇ. ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಚನ್ನರಾಯಪಟ್ಟಣ.